**DW-1:** ವೀರಪ್ರತಾಪ

ದಿನಾಂಕಃ **16.06.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ ವಾದಿಗಳ ಪರವಾಗಿ ಶ್ರೀ ಡಿ.ಪಿ.ಆರ್. ವಕೀಲರಿಂದಃ**

1. ಸ.ನಂ. 95 ಒಟ್ಟು 3 ಎಕರೆ ವಿಸ್ತೀರ್ಣ ಇದೆ. ಆ ಸ್ವತ್ತಿನ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಸ.ನಂ. 30/1 ಒಟ್ಟು 3 ಎಕರೆ 7 ಗುಂಟೆ ಇದೆ. ಆ ಸ್ವತ್ತಿನ ಪೂರ್ವಕ್ಕೆಃ ಜಯರಾಮಪ್ಪ, ಪಶ್ಚಿಮಕ್ಕೆಃ ಗೊತ್ತಿಲ್ಲ, ಉತ್ತರಕ್ಕೆಃ ಅವಲಪ್ಪ ರವರ ಜಮೀನು ಮತ್ತು ದಕ್ಷಿಣಕ್ಕೆ ನಮ್ಮ ದೊಡ್ಡ ತಾತ ಕರಿಯಣ್ಣ ರವರ ಜಮೀನು. ಸ.ನಂ. 30/3 ಒಟ್ಟು 3 ಎಕರೆ 17 ಗುಂಟೆ ಇರುತ್ತದೆ. ಆ ಸ್ವತ್ತಿನ ಪೂರ್ವಕ್ಕೆಃ ನೇಗಮಲ್ಲಯ್ಯ, ಪಶ್ಚಿಮಕ್ಕೆಃ ಸುಬ್ಬಯ್ಯಶೆಟ್ಟಿ, ಉತ್ತರಕ್ಕೆಃ ಕರಿಯಣ್ಣ ರವರ ಜಮೀನು ಮತ್ತು ದಕ್ಷಿಣಕ್ಕೆ ಅಯ್ಯಣ್ಣ ರವರ ಜಮೀನು ಇರುತ್ತದೆ. ಸ.ನಂ. 95 ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ಆ ಬಗ್ಗೆ ನಾನು ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

2. ಸ.ನಂ. 95 ಅನ್ನು ಆವಲಪ್ಪ ಬಿನ್ ದೊಡ್ಡೀರಪ್ಪ ರವರು ದಿನಾಂಕಃ 03.06.1981 ರಂದು ರೂ.10,000/- ಗಳಿಗೆ 2 ಎಕರೆಯನ್ನು ಖರೀದಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮ್ಮ ಮುತ್ತಾತ ರವರ ದನಗಳು ಮತ್ತು ಹಸುಗಳನ್ನು ಮಾರಾಟ ಮಾಡಿ ಖರೀದಿಸಿದ್ದಾರೆ ಎಂದು ಉತ್ತರಿಸುತ್ತಾರೆ. ನಾನು ಕಣ್ಣಾರೆ ನೋಡಿಲ್ಲ ಆದರೆ ನಮ್ಮ ತಾತ ರವರು ಹೇಳಿರುತ್ತಾರೆ. ಅವರು ನನಗೆ ಹೇಳಿದ ದಿನಾಂಕ ಗೊತ್ತಿಲ್ಲ. ಸ.ನಂ. 95 ಆವಲಪ್ಪ ಬಿನ್ ದೊಡ್ಡೀರಪ್ಪ ರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸ.ನಂ. 30/1 ಮತ್ತು 30/3 ರ ಎರಡು ಆಸ್ತಿಗಳನ್ನು ಆವಲಪ್ಪ ಬಿನ್ ದೊಡ್ಡೀರಪ್ಪ ರವರು ದಿನಾಂಕಃ 30.04.1966 ರಂದು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಅವರು 2 ತಾಕು ಸ್ವತ್ತನ್ನು ಖರೀದಿಸಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಮುತ್ತಾತ ಮತ್ತು ದೊಡ್ಡ ತಾತ ರವರು

ಜೊತೆಯಲ್ಲಿ ಇದ್ದಾಗ ಆವಲ ಬೊಮ್ಮಯ್ಯ ರವರ ಹೆಸರಿನಲ್ಲಿ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಆ ರೀತಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆವಲಪ್ಪ ರವರು ಖರಿದಿಸಿದ ನಂತರ ಪೋಡು ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ಆ 2 ಸ್ವತ್ತುಗಳನ್ನು ಆವಲಪ್ಪ ರವರು ಸ್ವಯಾರ್ಜಿತವಾಗಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ದೊಡ್ಡೀರಪ್ಪ ರವರು ಜೊತೆಯಲ್ಲಿ ಇದ್ದಾಗ ಅವರ ಹೆಸರಿನಲ್ಲಿ ಖರೀದಿಸಿದ್ದಾರೆ ಎಂದು ಉತ್ತರಿಸುತ್ತಾರೆ. ಅದಕ್ಕೂ ಮುಂಚೆ ಆವಲಬೊಮ್ಮಯ್ಯ ರವರ ಹೆಸರಿನಲ್ಲಿ ಆಗಿತ್ತು. ಆವಲ ಬೊಮ್ಮಯ್ಯ ರವರ ಹೆಸರಿಗೆ ಖಾತೆಯಾದ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ.

3. ಆವಲಪ್ಪ ರವರು ಸದರಿ ಸ್ವತ್ತುಗಳನ್ನು ವಾದಿಯ ಹೆಸರಿಗೆ ದಿನಾಂಕಃ 25.05.2015 ರಂದು ಊಯಿಲನ್ನು ಬರೆದಿರುತ್ತಾರೆ ಎಂದರೆ ಸಾಕ್ಷಿಯು ಸೃಷ್ಟಿ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ಊಯಿಲ ಬರೆದ ಸಂದರ್ಭ ಆವಲಪ್ಪ ರವರಿಗೆ 70 ವರ್ಷ ವಯಸ್ಸಾಗಿತ್ತು ಎಂದರೆ ಎಂದರೆ ಸರಿ. ಅವರಿಗೆ ನಡೆಯಲು ಆಗುತ್ತಿರಲಿಲ್ಲ. ಬೊಮ್ಮಲಿಂಗಪ್ಪರವರೇ ಆವಲಪ್ಪ ರವರನ್ನು ಪೋಷಣೆ ಮಾಡುತ್ತಿದ್ದು ಆ ಕಾರಣ ಅವರ ಹೆಸರಿಗೆ ಊಯಿಲನ್ನು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಅವರು ಸಾಯುವ ಸಂದರ್ಭದಲ್ಲಿ ಮತ್ತು ಊಯಿಲು ಬರೆದ ಸಂದರ್ಭ ವಾದಿಯ ಮನೆಯಲ್ಲಿ ವಾಸವಿದ್ದರು ಎಂದರೆ 2 ಕಡೆ ವಾಸವಿದ್ದರು ಎಂದು ಉತ್ತರಿಸುತ್ತಾರೆ. ಆವಲಪ್ಪ ರವರಿಗೆ ಅನಾರೋಗ್ಯವಿದ್ದು ವಾದಿಯೇ ಅವರಿಗೆ ಚಿಕಿತ್ಸೆ ಕೊಡಿಸಿ ಪೋಷಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆವಲಪ್ಪ ರವರು 1910 ರಲ್ಲಿ ಮೃತಪಟ್ಟಿರುತ್ತಾರೆ. ಅವರು ಮೃತಪಟ್ಟ ನಂತರ ವಾದಿಯೇ ಅವರ ಅಂತ್ಯಸಂಸ್ಕಾರ ಮತ್ತು ಕಾರ್ಯಗಳನ್ನು ನೇರವೇರಿಸಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲರೂ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ.

4. ವಾದಿಯೇ ಅವರ ಎಲ್ಲಾ ಕಾರ್ಯಗಳನ್ನು ನೇರವೇರಿಸಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕಃ 03.12.2021 ರಂದು ಮೃತಪಟ್ಟಿದ್ದು ವಾದಿಯೇ ಅವರ ಶವಸಂಸ್ಕಾರ

ಮತ್ತು ತಿಥಿಕಾರ್ಯವನ್ನು ನೇರವೇರಿಸಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲರೂ ಸೇರಿ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಆವಲಪ್ಪ ರವರೇ ಮರಣ ಶಾಸನವನ್ನು ಬರೆದಿದ್ದು ಅವರೇ ಹೆಬ್ಬೆರಳಿನ ಗುರುತನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮರಣ ಶಾಸನ ಪತ್ರವೂ ವಾದಿ ಆವಲಪ್ಪ ರವರ ಕರ್ಮಗಳನ್ನೆಲ್ಲಾ ಮಾಡಿದ ನಂತರ ಪೆಟ್ಟಿಗೆಯಲ್ಲಿ ಊಯಿಲು ಸಿಕ್ಕಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಆವಲಪ್ಪ ರವರ ಸ್ವಯಾರ್ಜಿತ ಸ್ವತ್ತುಗಳಾಗಿರುತ್ತವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನನಗೆ ಯಾವುದೇ ರೀತಿಯ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ವಾದಿಗೆ ತೊಂದರೆ ನೀಡಿದ ಕಾರಣ ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

(ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು)

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.